# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **292** |
| ಸದಸ್ಯರ ಹೆಸರು | : | ಡಾ. ಎಂ ಜಿ ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18-08-2026 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ ಒಂದು ವರ್ಷದಲ್ಲಿ ಬೀದರ್ ಜಿಲ್ಲೆಯ ಎಷ್ಟು ರೈತರ ಜಮೀನುಗಳ ಮಣ್ಣಿನ ಮಾದರಿಗಳನ್ನು ಪರೀಕ್ಷೆಗೊಳಪಡಿಸಲಾಗಿದೆ; ಸಂಗ್ರಹಿಸಲಾದ ಮಣ್ಣಿನ ಮಾದರಿಗಳ ಒಟ್ಟು ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಒಂದು ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ 15445 ರೈತರ ಜಮೀನುಗಳ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೊಳಪಡಿಸಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ಸಂಗ್ರಹಿಸಿ ವಿಶ್ಲೇಷಿಸಲಾದ ಮಣ್ಣು ಮಾದರಿಗಳ ಸಂಖ್ಯೆ</th></tr>
<tr><td>1</td><td>ಔರಾದ್</td><td>1388</td></tr>
<tr><td>2</td><td>ಬಸವಕಲ್ಯಾಣ</td><td>2460</td></tr>
<tr><td>3</td><td>ಬೀದರ್</td><td>3147</td></tr>
<tr><td>4</td><td>ಭಾಲ್ಕಿ</td><td>2681</td></tr>
<tr><td>5</td><td>ಚಿಟಗೊಪ್ಪ</td><td>2460</td></tr>
<tr><td>6</td><td>ಹುಮನಾಬಾದ್</td><td>1782</td></tr>
<tr><td>7</td><td>ಹುಲಸೂರು</td><td>560</td></tr>
<tr><td>8</td><td>ಕಮಲನಗರ</td><td>1817</td></tr>
<tr><td></td><td>ಒಟ್ಟು</td><td>15445</td></tr>
</table>
</td></tr>
<tr><td>(ಆ)</td><td>ಮಣ್ಣು ಪರೀಕ್ಷೆಯ ನಂತರ ಎಷ್ಟು ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್ (Soil Health Card) ವಿತರಿಸಲಾಗಿದೆ; ಕಾರ್ಡ್ ಶಿಫಾರಸ್ಸುಗಳ ಆಧಾರದ ಮೇಲೆ ಸಮತೋಲಿತ ರಸಗೊಬ್ಬರ ಬಳಕೆ, ಪೋಷಕಾಂಶ ನಿರ್ವಹಣೆ ಹಾಗೂ ಮಣ್ಣಿನ ಫಲವತ್ತತೆ ಕಾಪಾಡುವ ಕುರಿತು ರೈತರಿಗೆ ತಾಂತ್ರಿಕ ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗಿದೆಯೇ; (ವಿವರ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿ ಮಣ್ಣು ಪರೀಕ್ಷೆಯ ನಂತರ 15445 ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್ ವಿತರಿಸಲಾಗಿದೆ. ಈ ಕಾರ್ಡ್‌ಗಳ ಆಧಾರದ ಮೇಲೆ ಸಮತೋಲಿತ ರಸಗೊಬ್ಬರ ಬಳಕೆಯ ಕುರಿತು ರೈತರಿಗೆ ನೀಡಲಾದ ತಾಂತ್ರಿಕ ಮಾರ್ಗದರ್ಶನದ ವಿವರ ಈ ಕೆಳಕಂಡಂತೆ ನೀಡಲಾಗಿದೆ.<br>1. ರೈತರ ತಾಕು (ಜಮೀನು)ಗಳಲ್ಲಿ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಿ ಮಣ್ಣು ಆರೋಗ್ಯ ಚೀಟಿಗಳನ್ನು ಮುದ್ರಿಸಿ ವಿತರಿಸಲಾಗುತ್ತಿದ್ದು, ಸಮತೋಲನ ರಸಗೊಬ್ಬರಗಳ ಬಳಕೆಯ ಕುರಿತು ತಾಂತ್ರಿಕ ಮಾರ್ಗದರ್ಶನ ನೀಡಲಾಗಿದೆ.<br>2. ಶಾಲಾ ಮಣ್ಣು ಆರೋಗ್ಯ ಕಾರ್ಯಕ್ರಮದಡಿ ಶಾಲಾ ವಿದ್ಯಾರ್ಥಿಗಳಿಗೆ ಮಣ್ಣು ಆರೋಗ್ಯದ</td></tr>
</table>

| | | |
|---|---|---|
| | | ಕುರಿತು ಜಾಗೃತಿ ಮೂಡಿಸಲು ಮಕ್ಕಳಿಂದಲೇ ಮಣ್ಣು ಮಾದರಿಗಳ ಸಂಗ್ರಹಣೆ ವಿಶ್ಲೇಷಣೆ ಹಾಗೂ ಸಭೆಗಳನ್ನು ಆಯೋಜಿಸಿ ಮಣ್ಣು ಆರೋಗ್ಯ ಕಾರ್ಡ್‌ಗಳ ವಿತರಣೆಯೊಂದಿಗೆ ಮಣ್ಣಿನ ಆರೋಗ್ಯ ಹಾಗೂ ರಸಗೊಬ್ಬರಗಳ ಸಮತೋಲಿತ ಬಳಕೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.<br><br>3. ಬೀದರ್ ಜಿಲ್ಲೆಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿರುವ ಎಲ್ಲಾ ರೈತರ ತರಬೇತಿಗಳಲ್ಲಿ ಮಣ್ಣು ಆರೋಗ್ಯ, ಸಮತೋಲಿತ ರಸಗೊಬ್ಬರ ಬಳಕೆ, ಪೋಷಕಾಂಶ ನಿರ್ವಹಣೆ ಹಾಗೂ ಮಣ್ಣಿನ ಫಲವತ್ತತೆ ಕಾಪಾಡುವ ಕುರಿತು ತಾಂತ್ರಿಕ ಮಾರ್ಗದರ್ಶನ ನೀಡಲಾಗಿದೆ.<br><br>4. ಇಲಾಖೆಯ ವಿವಿಧ ಕಾರ್ಯಕ್ರಮಗಳು, ಆಕಾಶವಾಣಿ, ದೂರದರ್ಶನ, ಜಿಲ್ಲಾ/ರಾಜ್ಯ ಮಟ್ಟದ ಕಾರ್ಯಾಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಜೈವಿಕ ಗೊಬ್ಬರ ಹಾಗೂ ಸಾವಯವ ಗೊಬ್ಬರಗಳ ಬಳಕೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. |
| (ಇ) | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ (Soil Testing Laboratories) ಸಂಖ್ಯೆ ಎಷ್ಟು; ದೂರದ ಗ್ರಾಮಗಳ ರೈತರಿಗೆ ಅನುಕೂಲವಾಗುವಂತೆ ಸಂಚಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯ (Mobile Soil testing Laboration) ಸೇವೆ ಲಭ್ಯವಿದೆಯೇ; ಇಲ್ಲದಿದ್ದಲ್ಲಿ, ಆರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; | ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ 04 ಸರ್ಕಾರಿ ಮಣ್ಣು ಆರೋಗ್ಯ ಪ್ರಯೋಗಾಲಯ ಹಾಗೂ 01 ಖಾಸಗಿ ಮಣ್ಣು ಆರೋಗ್ಯ ಪ್ರಯೋಗಾಲಯಗಳಿವೆ.<br><br>ಜಿಲ್ಲೆಯಲ್ಲಿರುವ ಸರ್ಕಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳು:<br>1) ಮಣ್ಣು ಪರೀಕ್ಷಾ ಪ್ರಯೋಗಾಲಯ ಭಾಲ್ಕಿ.<br>2) ಮಣ್ಣು ಪರೀಕ್ಷಾ ಪ್ರಯೋಗಾಲಯ ಕೆ.ವಿ.ಕೆ ಬೀದರ್.<br>3) ಮಣ್ಣು ಪರೀಕ್ಷಾ ಪ್ರಯೋಗಾಲಯ ತೋಟಗಾರಿಕೆ ಮಹಾವಿದ್ಯಾಲಯ ಬೀದರ್.<br>4) ಮಣ್ಣು ಪರೀಕ್ಷಾ ಪ್ರಯೋಗಾಲಯ, ತೋಟಗಾರಿಕೆ ಇಲಾಖೆ ಬೀದರ್<br>ಖಾಸಗಿ ಮಣ್ಣು ಪರೀಕ್ಷಾ ಪ್ರಯೋಗಾಲಯ:<br>1. ಮಣ್ಣು ಪರೀಕ್ಷಾ ಪ್ರಯೋಗಾಲಯ ಮರಕಲ್ ಬೀದರ್ ಜಿಲ್ಲೆ.<br><br>ಸಂಚಾರಿ ಮಣ್ಣು ಪರೀಕ್ಷಾ ವಾಹನಗಳ **(MSTL)** ಸೌಲಭ್ಯ ಲಭ್ಯವಿಲ್ಲ. ಸಂಚಾರಿ ಮಣ್ಣು ಪರೀಕ್ಷಾ ವಾಹನಗಳ ಸೇವೆ ಆರಂಭಿಸುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |

| | | |
|---|---|---|
| (ಈ) | ಕಳೆದ ಮೂರು ವರ್ಷದಲ್ಲಿ ಅತಿಯಾದ ರಾಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಸಮತೋಲಿತ ಗೊಬ್ಬರ ಬಳಕೆ, ಸಾವಯವ ಗೊಬ್ಬರ ಬಳಕೆ ಹಾಗೂ ಮಣ್ಣಿನ ಗುಣಮಟ್ಟ ಸಂರಕ್ಷಣೆ ಕುರಿತು ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಎಷ್ಟು ಜಾಗೃತಿ ಕಾರ್ಯಕ್ರಮಗಳು, ತರಬೇತಿ ಶಿಬಿರಗಳು ಹಾಗೂ ಕ್ಷೇತ್ರ ಪ್ರದರ್ಶನಗಳನ್ನು ಆಯೋಜಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅತಿಯಾದ ರಾಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ನಿರ್ವಹಣೆಯಲ್ಲಿ ಸಮತೋಲಿತ ಗೊಬ್ಬರ ಬಳಕೆ, ಸಾವಯವ ಗೊಬ್ಬರ ಬಳಕೆ ಹಾಗೂ ಮಣ್ಣಿನ ಗುಣಮಟ್ಟ ಸಂರಕ್ಷಣೆ ಕುರಿತು ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಆಯೋಜಿಸಲಾಗಿರುವ ಜಾಗೃತಿ ಕಾರ್ಯಕ್ರಮಗಳು, ತರಬೇತಿ ಶಿಬಿರಗಳು ಹಾಗೂ ಕ್ಷೇತ್ರ ಪ್ರದರ್ಶನಗಳ ಬಗ್ಗೆ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಉ) | ಬೀದರ್ ಜಿಲ್ಲೆಯಲ್ಲಿ ಸಾವಯವ ಕೃಷಿ (Organic Farming) ಹಾಗೂ ನೈಸರ್ಗಿಕ ಕೃಷಿ (Natural Farming) ಉತ್ತೇಜಿಸಲು ಸರ್ಕಾರದಿಂದ ಯಾವ ವಿಶೇಷ ಯೋಜನೆಗಳು ಜಾರಿಯಲ್ಲಿವೆ; "ಸಾವಯವ ಗ್ರಾಮ" ಅಥವಾ "ನೈಸರ್ಗಿಕ ಕೃಷಿ ಗ್ರಾಮ" ಯೋಜನೆಯಡಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆಯೆ; ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಫಲಾನುಭವಿಗಳ ಸಂಖ್ಯೆ ಹಾಗೂ ತಾಲ್ಲೂಕುವಾರು ವಿವರ ನೀಡುವುದು? | ಬೀದರ್ ಜಿಲ್ಲೆಯಲ್ಲಿ ಸಾವಯವ ಹಾಗೂ ನೈಸರ್ಗಿಕ ಕೃಷಿಯನ್ನು ಉತ್ತೇಜಿಸಲು ಸರ್ಕಾರದಿಂದ ಸಾವಯವ ಇಂಗಾಲ ಅಭಿಯಾನ, ಸಸ್ಯ ಸಂರಕ್ಷಣಾ ಕಾರ್ಯಕ್ರಮದಡಿ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳ ವಿತರಣೆ, ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ 47 ಗ್ರಾಮಗಳನ್ನು ಆಯ್ಕೆ ಮಾಡಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ಬಿಡುಗಡೆಯಾದ ಅನುದಾನ ಮತ್ತು ಫಲಾನುಭವಿಗಳ ಸಂಖ್ಯೆಯ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

*ಕಡತ ಸಂಖ್ಯೆ: ಕೃ ಇ 190 ಎಎಂಎಸ್ 2026*

P. M. Narendraswamy

(ಪಿ.ಎಂ.ನರೇಂದ್ರಸ್ವಾಮಿ)
ಕೃಷಿ ಸಚಿವರು

**ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 292 ಕ್ಕೆ**

**ಅನುಬಂಧ-1**

ಕಳೆದ ಮೂರು ವರ್ಷಗಳಲ್ಲಿ ಅತಿಯಾದ ರಾಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಸಮತೋಲಿತ ಗೊಬ್ಬರ ಬಳಕೆ, ಸಾವಯವ ಗೊಬ್ಬರ ಬಳಕೆ ಹಾಗೂ ಮಣ್ಣಿನ ಗುಣಮಟ್ಟ ಸಂರಕ್ಷಣೆ ಕುರಿತು ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಬೀದರ್ ಜಿಲ್ಲೆಯಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮಗಳು (ಸಂಖ್ಯೆಗಳಲ್ಲಿ)

| ಕ್ರ. ಸಂ | ತಾಲ್ಲೂಕು | ಜಾಗೃತಿ ಕಾರ್ಯಕ್ರಮ | ತರಬೇತಿ ಶಿಬರ | ಕ್ಷೇತ್ರ ಪ್ರದರ್ಶನ | ಒಟ್ಟು |
|---|---|---|---|---|---|
| 1 | ಬೀದರ್ | 66 | 31 | 16 | 113 |
| 2 | ಔರಾದ್ | 60 | 22 | 13 | 95 |
| 3 | ಭಾಲ್ಕಿ | 66 | 35 | 17 | 118 |
| 4 | ಬಸವಕಲ್ಯಾಣ | 68 | 34 | 11 | 113 |
| 5 | ಹುಮನಾಬಾದ್ | 30 | 21 | 16 | 67 |
| 6 | ಚಿತ್ತಾಪುರ | 31 | 24 | 17 | 46 |
| 7 | ಹುಲಸೂರು | 18 | 12 | 16 | 46 |
| 8 | ಕಮಲನಗರ | 28 | 16 | 12 | 56 |
| | **ಒಟ್ಟು** | **367** | **195** | **118** | **680** |

**ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 292 ಕ್ಕೆ**

**ಅನುಬಂಧ-2**

1. ಸಾವಯವ ಇಂಗಾಲ ಅಭಿಯಾನ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ತಾಲ್ಲೂಕು | 2023-24 | | 2024-25 | | 2025-26 | |
|---|---|---|---|---|---|---|---|
| | | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ |
| 1 | ಔರಾದ (ಬಿ) | 3.18061 | 548 | 10.10625 | 665 | 3.12562 | 524 |
| 2 | ಬೀದರ | 3.18061 | 592 | 10.10625 | 597 | 3.12562 | 578 |
| 3 | ಭಾಲ್ಕಿ | 3.18061 | 587 | 10.10625 | 671 | 3.12562 | 571 |
| 4 | ಬಸವಕಲ್ಯಾಣ | 3.18061 | 482 | 10.10625 | 562 | 3.12562 | 595 |
| 5 | ಹುಮನಾಬಾದ | 3.18061 | 568 | 10.10625 | 615 | 3.12562 | 574 |
| **ಒಟ್ಟು** | | **15.90305** | **2777** | **50.53125** | **3110** | **15.6281** | **2842** |

2. ಸಸ್ಯ ಸಂರಕ್ಷಣೆ (ಜೈವಿಕ ಪೀಡೆನಾಶಕಗಳ ವಿತರಣೆ) (ರೂ.ಲಕ್ಷಗಳಲ್ಲಿ)

| **ಕ್ರ. ಸಂ** | ತಾಲ್ಲೂಕು | 2023-24 | | 2024-25 | | 2025-26 | |
|---|---|---|---|---|---|---|---|
| | | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ |
| 1 | ಔರಾದ (ಬಿ) | 1.40 | 2650 | 1.40 | 2200 | 1.60 | 2618 |
| 2 | ಬೀದರ | 1.40 | 2700 | 1.40 | 2391 | 1.60 | 2269 |
| 3 | ಭಾಲ್ಕಿ | 1.40 | 2512 | 1.40 | 2262 | 1.60 | 2412 |
| 4 | ಬಸವಕಲ್ಯಾಣ | 1.40 | 2609 | 1.40 | 2289 | 1.60 | 2648 |
| 5 | ಹುಮನಾಬಾದ | 11.40 | 7372 | 1.40 | 2179 | 1.60 | 2466 |
| ಒಟ್ಟು | | **17.00** | **17843** | **7.00** | **11321** | **8.00** | **12413** |

3. ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ (ರೂ.ಲಕ್ಷಗಳಲ್ಲಿ)

| **ಕ್ರ. ಸಂ** | ತಾಲ್ಲೂಕು | 2023-24 | | 2024-25 | | 2025-26 | |
|---|---|---|---|---|---|---|---|
| | | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಯಾದ ಅನುದಾನ | ಫಲಾನುಭವಿಗಳ ಸಂಖ್ಯೆ |
| 1 | ಔರಾದ (ಬಿ) | | | | | 50.608 | 750 |
| 2 | ಬೀದರ | | | | | 50.608 | 750 |
| 3 | ಭಾಲ್ಕಿ | | | | | 50.608 | 750 |
| 4 | ಬಸವಕಲ್ಯಾಣ | ಸದರಿ ವರ್ಷಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗಿರುವುದಿಲ್ಲ | | | | 50.608 | 750 |
| 5 | ಹುಮನಾಬಾದ | | | | | 50.608 | 750 |
| **ಒಟ್ಟು** | | | | | | 253.04 | 3750 |